ವಿಷಯ : – ಹೊನ್ನಾವರದ ಬಳಿ ಮಣ್ಣು ಕುಸಿತದಿಂದ ಮೃತ ಪಟ್ಟವರಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ಆರ್. ವಿ. ದೇಶಪಾಂಡೆ(ವಿರೋಧಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೇ, ಇವತ್ತು ನೋ ಕಾನ್‌ಫಿಡೆನ್ಸ್ ಮೋಷನ್ ಮೇಲೆ ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕು. ಶೂನ್ಯವೇಳೆ ಇಲ್ಲದಿರುವುದರಿಂದ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸರ್ಕಾರದ ಗಮನಕ್ಕೆ ಅದನ್ನು ತರಬೇಕು. ಸರ್ಕಾರ ನಾಳೆ ಉತ್ತರಕೊಟ್ಟರೆ ಇಂಥ ಮಹತ್ವದ ವಿಷಯಕ್ಕೆ ನಮಗೆ ಉತ್ತರ ಸಿಕ್ಕಿತು ಎಂದು ಅವರಿಗೆ ಸಮಾಧಾನವಾಗುತ್ತದೆ. ಶೂನ್ಯ ವೇಳೆ ಇಲ್ಲ ಎಂಬುದು ನನಗೂ ಗೊತ್ತಿದೆ. ಹೊನ್ನಾವರದಲ್ಲಿ ರೈಲ್ವೆಯಲ್ಲಿ ಕೆಲಸಮಾಡುವಾಗ ಮಣ್ಣು ಕುಸಿದು 7 ಜನರು ಭಾವಿಯಲ್ಲಿ ಸತ್ತಿದ್ದಾರೆ. ಮಾನ್ಯ ಜಾಫರ್ ಷರೀಫ್‌ರವರು ಅಲ್ಲಿಗೆ ಭೇಟಿ ಕೊಡುವುದಕ್ಕೆ ಪ್ರಯತ್ನ ಮಾಡಿದಾಗ ಹೆಲಿಕ್ಯಾಪ್ಟರ್ ಇಳಿಯುವುದಕ್ಕೆ ಸ್ವಲ್ಪ ತೊಂದರೆಯಾಯಿತು. ಇಂಥ ವಿಚಾರದಲ್ಲಿ ಸರ್ಕಾರ ಏನು ಪರಿಹಾರವನ್ನು ಕೊಟ್ಟಿದೆ ಎಂಬುದನ್ನು ನಾಳೆ ಹೇಳಿದರೂ ನಡೆಯುತ್ತದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ಎನ್. ನಾಯಕ್ : – ಅಲ್ಲಿ ಪರಿಹಾರದ ಬಗ್ಗೆ ಡಿಸಿಯವರನ್ನು ಕೇಳಿದಾಗ ಸರ್ಕಾರದ ಕ್ರಮ ಇನ್ನೂ ಏನೂ ಇರಲಿಲ್ಲ. ದುಡ್ಡು ಕೊಡುವುದಕ್ಕೆ ನಾನು ಹೋಗಿದ್ದೆ. ಜೊತೆಯಲ್ಲಿ ಡಿಸಿಯವರು ಬಂದಿದ್ದರು, ನಾವೆಲ್ಲಾ ನೋಡಿದ ಮೇಲೆ ಕೇಳಿದರು, ಸರ್ಕಾರದ ವತಿಯಿಂದ ಪರಿಹಾರ ಕೊಡುವುದಕ್ಕೆ ತಮ್ಮ ಹತ್ತಿರ ಏನಿದೆ ಎಂದು ಕೇಳಿದಾಗ ಡಿಸಿಯವರು ಅಸಹಾಯಕರಾಗಿದ್ದರು. ಮರಣ ಹೊಂದಿದವರಿಗೆ ರೈಲ್ವೆ ಇಲಾಖೆಯಿಂದ 5ಸಾವಿರ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಹೇಳಿದ್ದಾರೆಯೇ ಹೊರತು ಸರ್ಕಾರದ ವತಿಯಿಂದ ಏನು ಕೊಡುವುದು, ಬಿಡುವುದು ಎಂಬ ಮಾಹಿತಿ ಕೊಟ್ಟಿಲ್ಲ. ಆದುದರಿಂದ ನಾನು ಸಹ ಅಸಹಾಯಕನಾಗಿ ಹಿಂದಕ್ಕೆ ಬಂದಿದ್ದೇನೆ. ಆದಷ್ಟು ಬೇಗ ಏನಾದರೂ ಪರಿಹಾರ ಕೊಡುವುದರ ಬಗ್ಗೆ ತಾವು ಸ್ಟೇಟ್‌ಮೆಂಟ್ ಕೊಡುವುದು ಬಹಳ ಅವಶ್ಯಕವಾಗಿದೆ.

ಅಧ್ಯಕ್ಷರು : – ತಾವು ಕೊಟ್ಟ ಪತ್ರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : – ನಾನು ಒಂದು ವಿಚಾರ ಪ್ರಸ್ತಾಪ ಮಾಡುತ್ತೇನೆ. ಸರ್ಕಾರ ಬೇಕಾದರೆ ನಾಳೆ ನಾಡಿದ್ದು ಉತ್ತರ ಕೊಡಲಿ, ಇದು ಬಹಳ ಮಹತ್ವವಾದುದರಿಂದ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : – ಈಗ ಜೀರೊ ಅವರ್ ಇಲ್ಲ, ಆದುದರಿಂದ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ತಾವು ಬರೆದು ಕಳುಹಿಸಿ ಅದನ್ನು ನಾನು ಸರ್ಕಾರಕ್ಕೆ ಕಳುಹಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : – ನಮಗೆ ಉತ್ತರ ಬೇಕಲ್ಲಾ,

ಅಧ್ಯಕ್ಷರು : – ಇವತ್ತು ಅಥವಾ ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : – ನಿನ್ನೆ ತಾಳಿಕೋಟೆಯ ಕೋಮು ಗಲಭೆಯ ಬಗ್ಗೆ ಪ್ರಸ್ತಾಪ ಮಾಡಿದ್ದ ಸಂಬಂಧ ನೋಟಿಸ್ ಕಳುಹಿಸಿದ್ದೇನೆ.

ಅಧ್ಯಕ್ಷರು : – ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇವತ್ತು ಜೀರೊ ಅವರ್ ಇಲ್ಲ, ತಾವು ಮಹತ್ವವಾದ ವಿಷಯವಿದ್ದರೆ ಬರೆದು ಕಳುಹಿಸಿ.

ಶ್ರೀ ಸಿ.ಎಸ್. ನಾಡಗೌಡ : – ಅಲ್ಲಿ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಜನರಿಗೆ ಅಲ್ಲಿ

ಪರಿಹಾರ ಕೊಡುತ್ತಿಲ್ಲ. ಅತಿ ಮಹತ್ವವಾದ ಕ್ರಿಮಿನಲ್ ವಿಷಯವನ್ನು ಪ್ರಸ್ತಾಪ ಮಾಡದೇ ಮತ್ತೆ ಯಾವುದರ ಬಗ್ಗೆ ಪ್ರಸ್ತಾಪ ಮಾಡೋಣ? ಪ್ರತಿದಿನ ಅಂಗಡಿಗಳನ್ನು ಸುಡುತ್ತಿದ್ದಾರೆ. ಇದನ್ನು ಯಾರ ಮುಂದೆ ಹೋಗಿ ಹೇಳೋಣ? ಇದರ ಬಗ್ಗೆ ಮಂತ್ರಿಗಳು ಮೀಟಿಂಗ್ ಕರೆಯುತ್ತೇವೆಂದು ಹೇಳಿದರು. ಆದರೆ ಇನ್ನೂ ಸರ್ಕಾರ ಮೀಟಿಂಗ್ ಕರೆದಿಲ್ಲ. ನಾವು ಯಾರಿಗೆ ಹೇಳಬೇಕು?

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ : - ರಾಣಿಬೆನ್ನೂರ್ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಲಂಬಾಣಿ ಮಹಿಳೆಗೆ ಅನ್ಯಾಯವಾಗಿದೆ.

ವಿಷಯ : - ಈ ಸದನ ಶ್ರೀ ಎಂ.ವೀರಪ್ಪಮೊಯಿಲಿ ಅವರ ಸಚಿವ ಸಂಪುಟದಲ್ಲಿ ಅವಿಶ್ವಾಸ ವ್ಯಕ್ತಮಾಡಿರುವ ಪ್ರಸ್ತಾವನೆ ಕುರಿತು. ಅವಿಶ್ವಾಸ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ) : - ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಈ ಸರ್ಕಾರದ ಬಗ್ಗೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಕಳೆದ ಮೂರು ಮುಕ್ಕಾಲು ವರ್ಷಗಳಲ್ಲಿ ಈ ಸರ್ಕಾರ ಯಾವ ರೀತಿ ಜನತೆಗೆ ದ್ರೋಹ ಮಾಡಿ ಜನಹಿತವನ್ನು ಮರೆತು ಕುರ್ಚಿಗಾಗಿ ಬಡಿದಾಟ ನಡೆಸಿದರು ಎನ್ನುವುದನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಯಾವ ರೀತಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂತಹ ಹಣವನ್ನು ಲೂಟಿ ಮಾಡಿರುವಂತಹ ಅನೇಕ ಹಗರಣಗಳನ್ನು ಬಯಲು ಮಾಡಿದ್ದಾರೆ ಎಂಬುದೆಲ್ಲವನ್ನು ಸವಿಸ್ತಾರವಾಗಿ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ಈ ಸಂದರ್ಭದಲ್ಲಿ ಆ ಭಾಗದಲ್ಲಿರುವ ಭಿನ್ನಮತೀಯ ಶಾಸಕರಿಗೆ ಆದು ತೃಪ್ತಿ ತಂದಿದ್ದರೆ ಅವರ ಆತ್ಮಸಾಕ್ಷಿಗೆ ಅನುಸಾರವಾಗಿ ಈ ಒಂದು ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡುತ್ತೇವೆಂದು ಅವರೆಲ್ಲರೂ ಹೇಳಿದರೆ ನಾವು ಉಳಿದವರು ಕಂಠಶೋಷಣೆ ಮಾಡಿಕೊಳ್ಳುವಂತಹ ಅಗತ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವರಿಗೆ ದೇವರು ಸದ್ಬುದ್ಧಿ ಕೊಡಬಹುದು ಎನ್ನುವಂತಹ ನಿರೀಕ್ಷೆಯಲ್ಲಿದ್ದೇನೆ; ನೋಡೋಣ. ಜನರೂ ಸಹ ಇದನ್ನು ಎದುರು ನೋಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್(ಲೋಕೋಪಯೋಗಿ ಸಚಿವರು) : -ಆ ನಂಬಿಕೆ, ಹುಚ್ಚು ನಿಮಗೆ ಇದೆಯೊ?

ಶ್ರೀ ಬಿ.ಎಸ್. ಯಡಿಯೂರಪ್ಪ : - ಈ ರಾಜ್ಯದ ಜನರ ಒಂದು ದೌರ್ಭಾಗ್ಯ; ಮಾನ್ಯ ಕೃಷ್ಣರವರು ನಗುತ್ತಿದ್ದಾರೆ. ಮಾನ್ಯ ರಂಗನಾಥ್‌ರವರು ಆ ಹುಚ್ಚು ಹಿಡಿದಿದೆಯಾ, ಆ ನಂಬಿಕೆ ಇದೆಯಾ ಎಂದು ನನ್ನನ್ನು ಕೇಳುತ್ತಿದ್ದಾರೆ. ನೋಡೋಣ, ಇನ್ನೂ ಇವತ್ತು, ನಾಳೆ ಸಮಯವಿದೆ, ನಾನು ನಿರೀಕ್ಷೆ ಮಾಡುತ್ತೇನೆ. ಏಕೆಂದರೆ ನಿಮ್ಮ ನಮ್ಮ ಉದ್ದೇಶ ಒಂದೇ ಇದೆ; ವ್ಯತ್ಯಾಸ ಏನೆಂದರೆ ನಿಮ್ಮಲ್ಲಿ ಮತ್ತೆಯಾರಾದರೂ ಮುಖ್ಯಮಂತ್ರಿಯಾಗಿ ಮಂತ್ರಿಮಂಡಲ ರಚನೆ ಮಾಡಬೇಕೆಂದು ಹೊರಟಿದ್ದೀರಿ. ನಾವು ಈ ಕಡೆ ಇರುವವರು, ಒಂದೇಸಾರಿ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ ರಾಷ್ಟ್ರಪತಿಗಳ ಆಳ್ವಿಕೆಯನ್ನು ಜಾರಿಗೆ ತಂದು ಜನತಾ ನ್ಯಾಯಾಲಯದ ಮುಂದೆ ಹೋಗಿ ಜನಾಭಿಪ್ರಾಯ ಪಡೆಯೋಣವೆಂದು ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್ : - ಹಾಗೇನಾದರೂ ನೀವು ಅಂದುಕೊಂಡಿದ್ದರೆ ದೇಶಪಾಂಡೆಯವರು ಅಥವಾ ಸಿಂಧ್ಯಾರವರು ಅಧಿಕಾರಕ್ಕೆ ಬರಬಹುದು; ನೀವು ಮಾತ್ರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದೇ ಇಲ್ಲ.